# ಕಾಡೆಮ್ಮೆಯ ಜಾಣತನ




ಅದೊಂದು ಊರು. ಆ ಊರಿನಲ್ಲಿ ಒಂದು ದಟ್ಟವಾದ ಕಾಡಿತ್ತು. ಅಲ್ಲಿ ಕಾಡೆಮ್ಮೆಯ ಒಂದು ದೊಡ್ಡ ಹಿಂಡೇ ಇತ್ತು. ಅವು ಎಲ್ಲವೂ ಕೂಡಿ ಒಟ್ಟಿಗೆ ಮೇಯಲು ಹೋಗುತ್ತಿದ್ದವು. ಯಾವ ಕಾಡೆಮ್ಮೆಯೂ ಒಂಟಿಯಾಗಿ ಹೋಗುತ್ತಿರಲಿಲ್ಲ. ಏಕೆಂದರೆ ಹುಲಿ ಸಿಂಹಗಳ ಭಯ ಅವುಗಳನ್ನು ಕಾಡುತ್ತಿತ್ತು. ಅವುಗಳ ಬಾಯಿಗೆ ಸಿಕ್ಕ ಕಾಡೆಮ್ಮೆಗಳು ಹಿಂತಿರುಗಿ ಬರುವುದು ಸಾಧ್ಯವೇ ಇರಲಿಲ್ಲ. ಈ ಭಯ ಬಹುಮಟ್ಟಿಗೆ ಆ ಕಾಡಿನ ಎಲ್ಲ ಪ್ರಾಣಿಗಳನ್ನು ಕಾಡುತ್ತಿತ್ತು.

ಈ ಪ್ರಾಣಿಗಳ ಗುಂಪಿನಲ್ಲಿ ದಷ್ಟಪುಷ್ಟವಾಗಿದ್ದ ಕಾಡೆಮ್ಮೆಯೊಂದಿತ್ತು. ಅದರ ಮೈ ನುಣ್ಣನೆ ಮಿರ ಮಿರ ಮಿಂಚುತ್ತಿತ್ತು. ಅದರ ಕಣ್ಣುಗಳು ಅಗಲವಾಗಿ ಹೊಳೆಯುತ್ತಿದ್ದವು. ಅದೊಂದು ದಿನ ಒಂದು ಕಾಡೆಮ್ಮೆ ತನ್ನ ಗುಂಪಿನಿಂದ ಸ್ವಲ್ಪವೇ ಹಿಂದೆ ಉಳಿಯಿತು. ದೂರದಲ್ಲಿ ಮಸುಕಾಗಿ ಕಾಣುತ್ತಿದ್ದ ತನ್ನ ಗುಂಪನ್ನು ನೋಡಿ ಹೀಗೆಂದುಕೊಂಡಿತು:

‘ಛೇ! ನಾನೇಕೆ ಹೀಗೆ ಮಾಡಿಕೊಂಡೆ. ತಪ್ಪು ಮಾಡಿಬಿಟ್ಟೆನಲ್ಲ. ದಟ್ಟವಾದ ಈ ಹಸಿರು ಹುಲ್ಲಿಗೆ ಮನಸೋತು ದೂರ ಉಳಿದುಬಿಟ್ಟೆನಲ್ಲ. ಹೇಗಾದರೂ ಆಗಲಿ, ಬೇಗ ತನ್ನ ಬಳಗವನ್ನು ಸೇರಬೇಕು’ ಎಂದು ಅವಸರದಿಂದ ನಡೆಯಲಾರಂಭಿಸಿತು.

ಇದ್ದಕ್ಕಿದ್ದಂತೆ ಪೊದೆಯೊಂದರಲ್ಲಿ ಸದ್ದಾಯಿತು. ಆ ಸದ್ದನ್ನು ಕೇಳಿದ ಕಾಡೆಮ್ಮೆಯ ಜೀವ ನಡುಗಿತು. ನೋಡು ನೋಡುತ್ತಿದ್ದಂತೆ ಅಲ್ಲಿಂದ ಹುಲಿಯೊಂದು ನೆಗೆದು ಅದರ ಮೈ ಮೇಲೆ ಬೀಳಲು ಹವಣಿಸಿತು. ಏನು ಮಾಡಬೇಕೆಂದು ತೋಚದೆ ಆ ಎಮ್ಮೆಯು ಕ್ಷಣಹೊತ್ತು ಸುಮ್ಮನೆ ನಿಂತುಬಿಟ್ಟಿತು. ಹೋ...ಹೋ..ಇಂದು ತನಗೆ ಆಹಾರ ಸರಾಗವಾಗಿ ಸಿಕ್ಕಿತೆಂದು ಹುಲಿ ಒಳಗೊಳಗೆ ಖುಷಿಪಡುತ್ತಾ ಅದನ್ನೆ ನಿಂತು ನೋಡಿತು. ಅದರ ಮನದೊಳಗೆ ಯಾವ ಕಡೆಯಿಂದ ಪಟ್ಟು ಹಾಕಿ ಇದನ್ನು ಹಿಡಿಯಲಿ ಎಂಬ ಲೆಕ್ಕಾಚಾರ ನಡೆಯುತಿತ್ತು.

‘ಜೀವನ ಭದ್ರಾಣಿ ಪಶ್ಯಂತಿ’ ಎನ್ನುತ್ತಾರೆ ಬಲ್ಲವರು. ಹೇಗಾದರೂ ಮಾಡಿ ತನ್ನ ಜೀವವನ್ನು ಉಳಿಸಿಕೊಳ್ಳಲೇಬೇಕೆಂದು ಯೋಚಿಸುತ್ತಿದ್ದ ಕಾಡೆಮ್ಮೆ ಇದ್ದಕ್ಕಿದ್ದಂತೆ ತನ್ನ ಕಾಲುಗಳನ್ನು ನೆಲಕ್ಕೂರಿ ಹುಲಿಯೆದುರು ಮಲಗಿಬಿಟ್ಟಿತು. ಇದರಿಂದ ಹುಲಿಗೆ ತಬ್ಬಿಬ್ಬಾಯಿತು. ಅದು ಜೀವ ಉಳಿಸಿಕೊಳ್ಳಲು ಓಡಿಯೇ ಓಡುತ್ತದೆ. ಆಗ ತಾನು ಕೂಡ ಹಾರಿ ಅದರ ಕುತ್ತಿಗೆಗೆ ಬಾಯಿ ಹಾಕಬೇಕು ಎಂದು ಯೋಚಿಸುತ್ತಿದ್ದ ಹುಲಿಗೆ ಈಗ ಏನು ಮಾಡಬೇಕೆಂದು ತೋಚಲಿಲ್ಲ. ಅತ್ಯಂತ ಸುಲಭವಾಗಿ ದಕ್ಕಿರುವ ಆಹಾರ. ಸುಮ್ಮನೆ ಬಿಡಲಾದೀತೆ..... ನನಗೇನು...? ಎಂದು ಯೋಚಿಸುತ್ತಾ ಹುಲಿ ಗುರುಗುಟ್ಟುತ್ತ ಕಾಡೆಮ್ಮೆಯ ಬಳಿ ಬಂದಿತು.

ಅದರ ಅಗಲವಾದ ಹೊಳೆಯುವ ತುಸು ಹಳದಿ ಮಿಶ್ರಿತ ಕಪ್ಪು ಕಣ್ಣುಗಳು ಭಯಂಕರವಾಗಿದ್ದವು. ಅದರ ದವಡೆಗಳನ್ನು ನೋಡಿದರೆ ಸಾಕು ಜೀವ ಹೋದಂತಾಗುತ್ತಿತ್ತು. ಮೂಗಿನ ಕೆಳಗಿನ ಕೂದಲುಗಳು ಅದರ ಕ್ರೌರ್ಯವನ್ನು ಎತ್ತಿ ತೋರುತ್ತಿದ್ದವು. ಇನ್ನು ಹಳದಿ ಕಪ್ಪು ಗೆರೆಯ ಮೈಬಣ್ಣವನ್ನು ನೋಡಿದರೆ ಸಾಕು ಜೀವ ಬಾಯಿಗೆ ಬರುತ್ತಿತ್ತು. ಇಂತಹ ಹುಲಿಯ ಕೈಗೆ ಸಿಕ್ಕ ತಾನು ಬದುಕಿ ಉಳಿಯಲು ಸಾಧ್ಯವಾ ಎಂದು ಯೋಚಿಸುತ್ತಿದ್ದ ಕಾಡೆಮ್ಮೆ ಒಳಗೊಳಗೆ ದುಃಖಿಸುತಿತ್ತು. ‘ದೇವರೇ...ದೇವರೇ... ಇದೊಂದು ಬಾರಿ ನನ್ನನ್ನು ಕಾಪಾಡು’ ಎಂದು ಮೊರೆಯಿಡುತ್ತಿತ್ತು. ಆದರೂ ತನ್ನ ಭಯವನ್ನು ಹುಲಿಗೆ ತೋರಿಸಿಕೊಳ್ಳದೆ ಉಪಾಯದಿಂದ ಪಾರಾಗುವ ಬಗ್ಗೆ ಚಿಂತಿಸಿ ತಕ್ಷಣವೆ ಹುಲಿಯನ್ನು ಕುರಿತು ಹೀಗೆ ಹೇಳಿತು.

‘ಅಯ್ಯಾ...ಅಯ್ಯಾ..ಹುಲಿರಾಯ. ನನ್ನನ್ನು ನೋಡು. ನಾನು ಈಗ ಒಂದು ಜೀವಿಯಲ್ಲ. ನನ್ನ ಹೊಟ್ಟೆಯಲ್ಲಿ ಮರಿ ಬೆಳೆಯುತ್ತಿದೆ. ನೀನು ನನ್ನನ್ನು ಕೊಂದೆ ಅಂದರೆ ನನ್ನ ಮಗುವನ್ನು ಕೊಂದಂತೆ ಅಲ್ಲವೆ? ಹೇಳು. ನಿನ್ನ ಕಾಲು ಹಿಡಿದು ಬೇಡುತ್ತೇನೆ. ಹುಲಿರಾಯ, ಈ ಬಾರಿ ನನ್ನನ್ನು ತಿನ್ನದೆ ಬಿಟ್ಟುಬಿಡು. ನೋಡು ನನ್ನ ಗೆಳೆಯರೆಲ್ಲರೂ ತಮ್ಮ ಮಕ್ಕಳನ್ನು ನೋಡಲು ಹೊರಟುಹೋದರು. ನಾನು ತುಂಬು ಗರ್ಭಿಣಿಯಾದ್ದರಿಂದ ಅವರ ಜೊತೆಯಲ್ಲಿ ನಡೆಯಲಾಗದೆ ಹಿಂದೆ ಉಳಿದುಬಿಟ್ಟೆ. ಇದೇ ನನ್ನ ಮೊದಲನೆಯ ಮರಿ. ನನ್ನನ್ನು ಕೊಲ್ಲದೆ ದಯವಿಟ್ಟು ಕರುಣೆ ತೋರು. ನೀನು ಬಂದಾಗ ನಾನು ಓಡಿ ಹೋಗಿ ಜೀವ ಉಳಿಸಲು ಹೆಣಗಾಡಬಹುದಿತ್ತು. ಹೊಟ್ಟೆಯಲ್ಲಿ ಮರಿಹೊತ್ತು ಹೇಗೆ ಓಡಲಿ? ನೀನೆ ಹೇಳು’ ಎಂದು ಅಂಗಲಾಚಿ ಬೇಡಿತು. ಅದರ ಕಣ್ಣಿನಿಂದ ನೀರು ಬಳಬಳ